Regd. No. M. 1299 ॥ ಸತ್ಯಾನ್ನಾಸ್ತಿ ಪರೋ ಧರ್ಮಃ ॥ ಬಿಡಿ ಪ್ರತಿ ೩ ಪೈ.

ಸತ್ಯವಾದಿ

ಆಫೀಸ್—ಚಾಮರಾಜ ಅಗ್ರಹಾರ, ಮೈಸೂರು ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವುದು ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ 1—8—೦

ಸಂಪುಟ ೭] ಮೈಸೂರು, ಮಂಗಳವಾರ, ೨೩ ನೆ ಜೂಲೈ ೧೯೨೫. [ಸಂಚಿಕೆ ೨೬

೧೦೦೦ ರೂಪಾಯಿಗಳ ಬಹುಮಾನ
ಲೋಕಪ್ರಸಿದ್ಧವಾದ
ಸಾಲಾಮಿಸ್ರಿಮುರಬ್ಬ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು ತೆಗೆದುಕೊಳ್ಳಿರಿ

ಇದರ ಸೇವನೆಯಿಂದ ವೀರ್ಯವು ನೀರಿನಂತಿದ್ದರೂ ಸ್ವಪ್ನೇಂದ್ರಿಯವಾದರೂ ಸ್ತ್ರೀಸಂಗಕ್ಕೆ ಮೊದಲೆಸ್ಖಲನವಾದರು ಮೂತ್ರದೊಂದಿಗೆ ಹೊಗುತ್ತಿದ್ದರೂ, ದೋಷರ ಹಿತವಾಗಿ ಶರೀರಕ್ಕೆ ದಾರ್ಢ್ಯವನ್ನೂ ಆರೋಗ್ಯವನ್ನೂ ಉಂಟುಮಾಡುವದು, ಅಜೀರ್ಣ, ಮಲಬದ್ಧತೆ, ಮೆದುಳಿನ ಬಲಹೀನತೆ, ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ 'ಸಾಲಾಮಿಸ್ರಿ' ಎಂಬುವುದು ಕಾಬೂಲ್ ಕಾಂಧಹಾರ್ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ. ಈ ಔಷಧದಿಂದ ಗುಣಹೊಂದಿದ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ, ಆಫ್ರಿಕ, ಬರ್ಮ, ಪೀನಾಂಗ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ಸಕಲನ್ನು ಯಾರುಬೇಕಾದರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಕ ಅದನ್ನು ಪಡೆಯಬಹುದು. 1 ಡಬ್ಬವನ್ನು 15 ದಿನಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. 2 ಯಾ 3 ಡಬ್ಬಗಳು ಪೂರ್ಣವಾಗಿ ಗುಣವನ್ನುಂಟುಮಾಡುವುವು. ಅನುಮಾನ ಪತ್ರಿಕೆಯು ಡಬ್ಬಿ ಸಂಗಡಲೇ ಇರುತ್ತೆ. ಹೆಸರು ವಿಳಾಸ ಸ್ಪಷ್ಟವಾಗಿ ತಿಳಿಯುವಂತೆ ಇರಬೇಕು.

ಕ್ರಯ ಡಬ್ಬಿ 1 ಕ್ಕೆ ರೂ. 2—0—0
ಪೋಸ್ಟಲು ಖರ್ಚು 1 ರಿಂದ 3 ಡಬ್ಬಿಗಳಿಗೆ 8 ಆ.
ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯಕವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿಕೊಳ್ಳಬಹುದು.

ಪತ್ರ ವ್ಯವಹಾರ ಅಡ್ರೆಸ್—ಮಿಸ್ರಿ, ಬೆಂಗಳೂರು ಸಿಟಿ.
ಮಾಲೀಕರು—ಡಿ ಮನ್ನಾಲಾಲ್, ಡೆಲ್ಲಿ ವೈದ್ಯರು,
ಸಾಲಾಮಿಸ್ರಿ ಮುರಬ್ಬಾ ಡಿಪೋ,
ಬೆಂಗಳೂರು ಸಿಟಿ

ಸೀಮೆ ಭಂಗಾರದ ರೇಡಿಯಂ ರಿಸ್ಟ್‌ವಾಚ್



ಚಿತ್ರದಲ್ಲಿ ಕಾಣುವಂತೆಯೇ ಇರುವ ಈ ಗಡಿಯಾರಗಳು ಹೊಸದಾಗಿ ಬಂದಿವೆ. ಈ ಗಡಿಯಾರದ ಕಾಂಪೊಸಿಷ್ಟಗಳು ಬಹು ಒಳ್ಳೆಯವು. ಮತ್ತು ಬಲಿಷ್ಟವಾದವು. ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವುದು. ಒಂದು ವೇಳೆ ಹಿಂದು ಮುಂದು ಹೋದರೂ ನಾವೇ ಸರಿಮಾಡಿಕೊಳ್ಳಬಹುದು. ಈ ಗಡಿಯಾರಗಳು ಸ್ವಿಡ್ಜರ್‌ಲ್ಯಾಂಡು ದೇಶದಲ್ಲಿ ತಯಾರಾದುವು. ಇತರ ಗಡಿಯಾರಗಳಲ್ಲಿ ರಾತ್ರಿ ವೇಳೆಯಲ್ಲಿ ಗಂಟೆ ನೋಡಬೇಕಾದರೆ ಬೆಳಕು ಬೇಕು. ಈ ಗಡಿಯಾರಗಳಲ್ಲಿ ರಾತ್ರಿ ವೇಳೆಯಲ್ಲಿ ಗಂಟೆ ನೋಡಬೇಕಾದರೆ ಬೆಳಕು ಅವಶ್ಯಕವಿಲ್ಲ. ಎಷ್ಟು ಕತ್ತಲೆಯಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಪ್ರಕಾಶವಾಗಿ ಗಂಟೆ ತೋರಿಸುವುದು. ಹಗಲು ವೇಳೆಯಲ್ಲಿ ಸಾಧಾರಣ ಗಡಿಯಾರಗಳಂತೆ ಇರುವುದು.

ಕ್ರಯ ಗಡಿಯಾರ 1 ಕ್ಕೆ ರೂ. 7—8—0
ಬೆಳ್ಳಿ ಗಡಿಯಾರ 1 ಕ್ಕೆ ರೂ. 9—0—0

ವಿಳಾಸ:—ಗೌರಿ ಅಂಡ್ ಕೋ.,
ನಂ. 39 ಪರಮಾನಂದ ಮೊದಲಿ ಬೀದಿ.
ಮಿಂಟ್ ಪೋಸ್ಟು, ಮದರಾಸ್.

ಹೊಸಮಾದರಿಯ ಊದಬತ್ತಿಗಳು

ಉತ್ತಮವಾದ ಮೂಲಿಕೆಗಳಿಂದಲೂ ಅತ್ತರು ಮೊದಲಾದ ಸಾರಗಳಿಂದಲೂ ಒಡಗೂಡಿ ದೇವತಾ ಪೂಜ್ಯಕ್ಕೆ ಯೋಗ್ಯವಾದ 'ದಶಾಂಗಬತ್ತಿ' ಎಂಬದಾಗಿ ಪ್ರಸಿದ್ಧಿಹೊಂದಿರುವ ಹೊಸರೀತಿಯ ಊದುಬತ್ತಿಗಳು ನಮ್ಮಲ್ಲಿ ತಯಾರಾಗಿ ಬಿಕರಿಗೆ ಸಿದ್ಧವಾಗಿವೆ ಕ್ರಯ ಸೇರು ೧ ಕ್ಕೆ (ಸುಮಾರು ೬೦೦ ಬತ್ತಿಗಳು) ೩ ರೂಪಾಯಿ ಮಾತ್ರ. ಸರ್ವರೂ ತರಿಸಿ ತನ್ಮೂಲಕ ನಮ್ಮ ಶ್ರಮವನ್ನು ಸಾರ್ಥಕಗೊಳಿಬೇಕಾಗಿ ಪ್ರಾರ್ಥನೆ. ನಮ್ಮಲ್ಲಿ ಇನ್ನೂ ಇತರ ವಿಧವಾದ ಹೆಬ್ಬಿನ ಬೆಲೆಯ ಅಂಬರ್ ಕಸ್ತೂರಿಬತ್ತಿಗಳೂ, ಗಂಧದಬಿಲ್ಲೆ ಅರಗಜ, ಪನ್ನೀರು ವಗೈರೆ ಸಹಾ ದೊರೆಯುತ್ತೆ

ಇದಲ್ಲದೆ ನಂಜನಗೂಡಿನ ಮಿ|| ಬಿ.ವಿ. ಪಂಡಿತರ ಲೋಕಪ್ರಸಿದ್ಧವಾದ ಸಿದ್ಧೌಷಧಗಳೂ, ಷರಬತ್ತುಗಳೂ, ತೈಲಗಳೂ, ಲೇಹ್ಯಗಳೂ ನಮ್ಮಲ್ಲಿ ಸಿಕ್ಕುತ್ತೆ,

ಸಿ. ಪದ್ಮಯ್ಯ, ಕಮರ್ಷಿಯಲ್ ಹಾಲ್,
ಸಂತೇಪೇಟೆ, ಮೈಸೂರು.

ಸತ್ಯವಾದಿ ಪ್ರೆಸ್ ಮೈಸೂರು

—೦—

ನಾವು ಎಲ್ಲಾ ವಿಧವಾದ ಮುದ್ರಣ ಕೆಲಸವನ್ನೂ ಸುಲಭ ದರದಿಂದಲೂ, ಸೊಗಸಾಗಿಯೂ, ಸತ್ಕಾಲದಲ್ಲಿಯೂ ಮಾಡಿಕೊಡುತ್ತೇವೆ.

MYSORE GOVERNMENT
LOAN BONDS
&
Shares of Prominent
Companies
BOUGHT & SOLD

For particulars apply to:—

THE SEMAH ELISHA COMPANY
MYSORE.

ಮೈಸೂರು ಸರ್ಕಾರಿ ಸಾಲದ ಪತ್ರ
ಮತ್ತು ಕಂಪೆನಿ ಷೇರುಗಳನ್ನು
ಕೊಂಡುಕೊಳ್ಳುತ್ತೇವೆ
ಮತ್ತು
ಬಿಕರಿ ಮಾಡುತ್ತೇವೆ.

ಸೇಮಾ ಇಲೈಷಾ ಕಂಪೆನಿ ಮೈಸೂರು.

ಭಾರತಸರ್ವಸ್ವ

ಭರತಖಂಡದ ಪ್ರಖ್ಯಾತ ಕವಯಿತ್ರಿಯರೂ ಉಜ್ವಲ ದೇಶಭಕ್ತೆಯರೂ ಆದ ಶ್ರೀಮತಿ ಸರೋಜಿನಿ ದೇವಿಯರ ಸುಪ್ರಸಿದ್ಧ ಪುಸ್ತಕವಾದ 'ಸೋಲ್ ಆಫ್ ಇಂಡಿಯ' ಎಂಬುದರ ಕನ್ನಡ ಪರಿವರ್ತನ ಕ್ರಯ 1 ಆಣೆ ಒಂದೂವರಾಣೆಯ ಸ್ಟಾಂಪನ್ನು ಕಳುಹಿಸಿದರೆ ಒಂದು ಪುಸ್ತಕ ಕಳುಹಿಸಲ್ಪಡುತ್ತದೆ.

ವಿಳಾಸ—ಸತ್ಯವಾದಿ ಆಫೀಸ್ ಮೈಸೂರು.

ಕಲಾಮಂದಿರಂ, ಬೆಂಗಳೂರು ಸಿಟಿ

ನಮ್ಮಲ್ಲಿ ಎಲ್ಲಾ ವಿಧವಾದ ಪೈಂಟಿಂಗ್ ಎಂಲಾರ್ಜಮೆಂಟು ಕೆಲಸಗಳೂ, ಚಿತ್ರಪಟಗಳನ್ನು ಬರೆಯುವುದು ಮುಂತಾದ ಕುಶಲವಿದ್ಯೆಗಳು ಉತ್ತಮ ರೀತಿಯಿಂದ ನಡೆಯುತ್ತವೆ. ಮತ್ತು ವಿದ್ಯಾರ್ಥಿಗಳನ್ನು ಕುಶಲವಿದ್ಯೆಗಳಲ್ಲಿ ತಯಾರ್ಮಾಡುವೆವು. ಈ ಒಂದು ತಿಂಗಳವರಿಗೆ 15-12 ಸೈಜು ಎಂಲಾರ್ಜ್‌ಮೆಂಟ್ ಮಾಡುವುದಕ್ಕೆ ಕಮ್ಮಿ ಚಾರ್ಜು ಅಂದರೆ 12 ರುಪಾಯಿಗೆ ಮಾಡಿಕೊಡುವೆವು. ಫೋಟೋ ಮತ್ತು ಅರ್ಧ ಹಣ ಕಳುಹಿಸಿ.

"ಸತ್ಯವಾದಿ"
೨೩ನೆ ಜೂಲೈ ೧೯೨೫

ದೇಶಬಂಧು
ಸಿ. ಆರ್. ದಾಸ್‌ರವರ
ಅಕಾಲ ಮರಣ

——

ಕಳೆದ ಮಂಗಳವಾರ ಮಧ್ಯಾಹ್ನ ತಮ್ಮ ೫೫ ನೇ ವಯಸ್ಸಿನಲ್ಲಿ ದೇಶಬಂಧು ಚಿತ್ತರಂಜನ ದಾಸರವರು ಡಾರ್ಜಿಲಿಂಗಿನಲ್ಲಿ ದೈವಾಧೀನರಾದರು. ಮಹಾತ್ಮ ಗಾಂಧಿಯವರನ್ನು ಬಿಟ್ಟಲ್ಲಿ ಭರತಖಂಡದರಾಜಕೀಯ ವಿಪ್ಲವಗಳ ಸನ್ನಿವೇಶನ ಪ್ರಮುಖ ಸ್ಥಾನವನ್ನು ವಹಿಸಿ ಕಾರ್ಯ ಮಾಡತೊಡಗಿದ್ದವರಿವರೇ ಇಂತಹವರ ಮರಣ ವದಂತಿಯು ಭರತಖಂಡದ ಎಲ್ಲಾ ಭಾಗಗಳಲ್ಲಿಯೂ ಕೂಡಲೇ ಹರಡಿ, ಈ ವಾರ್ತೆ ತಲಪಿದೊಡನೆ ಆಯಾ ಸ್ಥಳಗಳಲ್ಲಿ ಕೇಳಿದವರ ಮನಸ್ಸನ್ನೆಲ್ಲ ದುಃಖ ಮತ್ತು ವ್ಯಸನದಿಂದ ಮಗ್ನ ಮಾಡಿತೆಂದರೆ ಅತಿಶಯವೇನೂ ಇಲ್ಲ. ಅಂದರೆ, ಈ ಮಹನೀಯರ ಮರಣವು ದೇಶಕ್ಕೇ ಒದಗಿದ ಒಂದು ನಷ್ಟ ಎಂದು ಭಾವಿಸಲಾಗಿದೆ. ಇವರ ಕಷ್ಟಸಹಿಷ್ಣುತೆ, ಧೈರ್ಯ, ಸ್ಥೈರ್ಯ, ಸ್ವಾರ್ಥತ್ಯಾಗ, ಇವರು ನಿರಂಕುಶ ಪ್ರಭುತ್ವದೊಂದಿಗೆ ಮಾಡಿದ ಸಾಹಸಕಾರ್ಯಗಳು, ಇವುಗಳಲ್ಲಿ ಇವರಿಗೆ ಸಮಾನ ಪುರುಷರು ಭಾರತ ಭೂಮಿಯಲ್ಲಿ ದೊರೆತಿರುವುದು ಅತಿವಿರಳ.

ಚಿತ್ತರಂಜನ ದಾಸರವರು ೧೮೭೦ರಲ್ಲಿ ಕಲ್ಕತ್ತಾದಲ್ಲಿ ಜನ್ಮಗ್ರಹಣ ಮಾಡಿದರು. ಕಲ್ಕತ್ತಾದ ಲಂಡನ್ ಮಿಷನರಿ ಕಾಲೇಜಿನಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಪಡೆದು, ನಂತರ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಉತ್ತೀರ್ಣರಾಗಿ ಇಂಡಿಯನ್ ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲು ಇಂಗ್ಲೆಂಡಿಗೆ ಪ್ರಯಾಣ ಮಾಡಿದರು. ಕೆಲವು ಕಾಲ ಅದಕ್ಕೆ ಓದಿ, ನಂತರ ಬ್ಯಾರಿಸ್ಟರ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಇಂಡಿಯಾಕ್ಕೆ ಬಂದು, ನಂತರ ವಕೀಲಿಯಲ್ಲಿ ಪದಾರ್ಪಣ ಮಾಡಿದರು. ಇವರು ೧೯೦೭ರಲ್ಲಿ ಅರವಿಂದಘೋಷರಮೇಲೆ ರಾಜದ್ರೋಹದ ಮೊಖದ್ದಮಾ ನಡೆದಾಗ, ಅವರ ಕಡೆ ವಕಾಲತ್ತು ನಡೆಸಿ, ತಮ್ಮ ಬುದ್ಧಿ ಕುಶಲತೆಯಿಂದ ಅದರಿಂದ ಘೋಷರನ್ನು ಬಿಡುಗಡೆಮಾಡಲು, ದೇಶಬಂಧುರವರ ಹೆಸರು ತುಂಬಾ ಪ್ರಸಿದ್ಧಿಗೆ ಬಂದು, ಇವರಿಗೆ ಮೊಖದ್ದಮಾಗಳು ಹೇರಳವಾಗಿ ದೊರೆತು, ಸಂಪಾದನೆಯು ತುಂಬಾ ಹೆಚ್ಚಿತು. ತಮ್ಮ ಸಂಪಾದನೆಯಲ್ಲಿ ಹೆಚ್ಚು ಭಾಗವನ್ನು ದಾನಧರ್ಮ ಮಾಡುತ್ತಿದ್ದರು.

ಇವರ ತಂದೆಯವರು ತುಂಬಾ ಸಾಲ ಮಾಡಿ ಸಾಲಾ ತೀರಿಸಲಾಗದೆ, ಇನ್‌ಸಾಲ್ವೆಂಟಾಗಿದ್ದರು. ಆದರೆ ದಾಸರವರು ತಮ್ಮ ಮನೆತನಕ್ಕೆ ಇನ್‌ಸಾಲ್ವೆಂಟಿಂಬ ಅಪವಾದವು ಬಂದುದಕ್ಕೆ ವ್ಯಸನಾಕ್ರಾಂತರಾಗಿ ಇನ್‌ಸಾಲ್ವೆನ್ಸಿ ಎಂಬ ಅಪವಾದದಿಂದ ಬಿಡುಗಡೆಯಾಗಲು ಕೋರ್ಟಿಗೆ ಅರ್ಜಿ ಹಾಕಿ, ಅಪ್ಪನೆ ಪಜೆಮ್ಮ ಸಾಲಗಾರರಿಗೆಲ್ಲಾ ಬಡ್ಡಿ ಸಮೇತ ಹಣ ಪಾವತಿ ಮಾಡಿದರು.

೧೯೨೦ರಲ್ಲಿ ಇವರು ಅಸಹಾಕ ಚಳವಳಿಗೆ ಸೇರಿ, ೧೯೨೧ರಲ್ಲಿ ದಸ್ತಗಿರಿಮಾಡಲ್ಪಟ್ಟು, ಫೆಬ್ರವರಿ ೧೯೨೨ರಲ್ಲಿ ೬ ತಿಂಗಳು ಸಜ ವಿಧಿಸಲ್ಪಟ್ಟು, ಆಗಸ್ಟಿನಲ್ಲಿ ಬಿಡುಗಡೆಯಾಗಿ, ಡಿಶೆಂಬರಿನ ಕಾಂಗ್ರೆಸ್ಸಿನ ಅಧ್ಯಕ್ಷ ಸ್ಥಾನವನ್ನು ವಹಿಸಿ, ಜನವರಿ ೧೯೨೩ರಲ್ಲಿ ಸ್ವರಾಜ್ಯ ಪಾರ್ಟಿಯನ್ನು ಸ್ಥಾಪಿಸಿ, ೧೯೨೩ರಲ್ಲಿ ಡಯಾರ್ಕಿಯನ್ನು ಬಂಗಾಳಾದಲ್ಲಿ ಹಾಳುಮಾಡಿದರು. ಇವರ ನಡೆವಳಿಕೆಯನ್ನು ಅನುಸರಿಸಿ ಅವರ ಬುದ್ಧಿವಾದದಂತೆ, ನಡೆದು ಸ್ವರಾಜ್ಯ ಪಡೆಯಲು ಸಾಧಿಸುವದೇ ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಿದೆ.

ಭರತ ಖಂಡದ ಎಲ್ಲಾ ಕಡೆಗಡೆಗಳಲ್ಲಿಯೂ ಸಂತಾಪ ಸೂಚಕವಾದ ಸಭೆಗಳು ನಡೆದವು. ಜುಲೈ ೧೮ನೇ ತಾರೀಖಿನ ದಿವಸ ಇವರ ಶ್ರಾದ್ಧವಾದ್ದರಿಂದ ಅವತ್ತು ಸಾಯಂಕಾಲ ೫ ಘಂಟೆಗೆ ಎಲ್ಲೆಲ್ಲೂ ಸ್ಮಾರಕ ಮೀಟಿಂಗು ನಡೆಯಬೇಕೆಂದು ಮಹಾತ್ಮಾ ಗಾಂಧಿಯವರ ಆಜ್ಞೆ !

ಶೋಕದಿಂದ ತುಂಬಿರುವ ದೇಶಬಂಧುರವರ ಪತ್ನೀ ಪುತ್ರರಿಗೆ ಸಂತಾಪವನ್ನರ್ಪಿಸಿ, ದಾಸರವರ ಆತ್ಮಕ್ಕೆ ಶಾಂತತೆ ಉಂಟಾಗಲೆಂದು ಹಾರೈಸುತ್ತೇವೆ.

ಜನಾಧಿಕ್ಯ ನಿವಾರಣೆ

——

ಪ್ರಜಾಸಂಖ್ಯೆ ಹೆಚ್ಚುತ್ತಿರುವುದರಿಂದ ದಾರಿದ್ರ್ಯವು ಏರುತ್ತಿರುವುದೆಂದೂ ಆದುದರಿಂದ ಅದನ್ನೂ ಯಾವಮಾರ್ಗದಿಂದಲಾದರೂ ನಿರೋಧಿಸಬೇಕೆಂದೂ ಯೂರೋಪಿನಲ್ಲಿ ಬಹುಕಾಲದಿಂದಲೂ ಪ್ರಯತ್ನ ವಿರುವುದು ಇದಕ್ಕಾಗಿ ಪರಿಶೋಧನೆಗಳು ನಡೆಯುತ್ತಿವೆ. ಮಾಲ್‌ಥೂಸ್ ಎಂಬ ಸಿದ್ಧಾಂತ ಪ್ರಕಾರವಾಗಿ ಸ್ತ್ರೀಯರು ಗರ್ಭಧರಿಸದಂತೆ ಪ್ರತಿಕ್ರಿಯೆಗಳನ್ನ ವಲಂಬಿಸಬೇಕು. ಇಂಥಾ ಪ್ರತಿಕ್ರಿಯೆಗಳನ್ನ ಕುರಿತು ಅವರು ಹಲವು ರೀತಿಯಾಗಿ ಅಭಿಪ್ರಾಯವನ್ನು ಕೊಡುತ್ತಿರುವರು.

ಭಾರತಭೂಮಿಯಲಿ ಸರ್ವವೂ ಈಶ್ವರ ಸಂಕಲ್ಪಕ್ಕೇ ಸೇರಿಸಿರುವುದೆಂದು ತತ್ವ. ಗಾಂಧಿ ಮಹಾತ್ಮರು ಈ ವಿಷಯವಾಗಿ ಒರೆಯುವಾಗ ಕೃತ್ರಿಮ ಪ್ರತಿಕ್ರಿಯೆಗಳು ಎಂದೂ ಲಾಭಕರವಾದುದಲ್ಲವೆಂದೂ, ಉಳಿದವು ಶಾರೀರಕ ನೈತಿಕ ಹಾನಿಯನ್ನು ಸಹ ಉಂಟು ಮಾಡುವುದೆಂದೂ, ಇಂದ್ರಿಯ ನಿಗ್ರಹದಿಂದಲೂ, ಬ್ರಹ್ಮಚರ್ಯವನ್ನು ಆಚರಿಸುವುದರಿಂದಲೂ ಮಾತ್ರ ಸರಿಯಾಗುವುದೆಂದು ತಿಳಿಸಿರುವರು. ಮಹಾತ್ಮರ ವಾಕ್ಯುಗಳು ಅಸಹಜವಾದುದೆಂದೂ ಅಸಂಭವವಾದ ಸಿದ್ಧಾಂತವನ್ನ ಪ್ರತಿಪಾದಿಸುತ್ತಿರುವುದೆಂದೂ ಮಾನವನಿಗೆ ಕಾಮೇಚ್ಛೆಯು ಸಹಜವೆಂದೂ ಅದನ್ನು ಬಲವಂತವಾಗಿ ನಿರೋಧಿಸುವುದಕ್ಕೆ ಸಾಧ್ಯವಲ್ಲವೆಂದೂ, ಪ್ರಕೃತಿ ಶಾಸ್ತ್ರ ಸಂಬಂಧವಾದ ಪದ್ಧತಿಗಳನ್ನು ಅವಲಂಬಿಸಿ ಕಾಮೋಪಭೋಗಗಳಿಗೆ ಭಂಗವಿಲ್ಲದೆ ಜನನಗಳನ್ನ ಸರಿಪಡಿಸಬೇಕೆಂದೂ, ಪಾಶ್ಚಾತ್ಯ ವಿಮರ್ಶಕರು ಪ್ರತ್ಯುತ್ತರವನ್ನಿತ್ತರೇವಿನಾ ಮಹಾತ್ಮರ ಅಭಿಪ್ರಾಯವು ಮಾತ್ರ ಮಾರ್ಪಡಲಿಲ್ಲ.

ಇಂಗ್ಲೆಂಡಿನಲ್ಲಿ ಈ ವಿಚಾರವನ್ನು ಕುರಿತು ಚರ್ಚಿಸಿ ರಿಪೋರ್ಟುಮಾಡಲು ವಿಂಚೆಸ್ಟರ್ ಪ್ರಭುವಿನ ಅಧ್ಯಕ್ಷತೆಯಲ್ಲಿ ಒಂದು ವಿಚಾರಣೆ ಸಂಘವು ಏರ್ಪಾಡಾಯಿತು. ಆ ಸಂಘದಲ್ಲಿ ಮತವೈದ್ಯಾದಿ ಶಾಖೆಗಳಿಗೆ ಸೇರಿದ ಪ್ರತಿನಿಧಿಗಳು ಅನೇಕರಿರುವರು. ವಿಚಾರಣಾ ಸಂಘದವರು ರಿಪೋರ್ಟು ಪ್ರಕಟಿಸಿರುವಂತೆ ತಿಳಿದು ಬಂದಿರುವುದು.

ಈ ಸಂಘದವರು ಮಹಾತ್ಮರ ಅಭಿಪ್ರಾಯದಂತೆಯೇ ಅಭಿಪ್ರಾಯಪಟ್ಟಿರುವರು. ಜನನವು ಅಧಿಕವಾಗುವುದನ್ನು ನಿವಾರಿಸುವುದಕ್ಕೆ ಇಂದ್ರಿಯನಿಗ್ರಹಕ್ಕಿಂತಲೂ ಫಲಪ್ರದವಾದ ಮಾರ್ಗವಿಲ್ಲವೆಂದು ಇವರು ನಿರೂಪಿಸಿರುವರು. ಕೃತ್ರಿಮ ಪದ್ಧತಿಗಳು ಕೆಲಸಕ್ಕೆ ಬಾರದವೆಂದೂ ಸೂಚಿಸಿದರು. ನಿರಾಡಂಬರ ಜೀವನವನ್ನು ಸಾಂಘಿಕ ಆರ್ಥಿಕ ಪರಿಸ್ಥಿತಿಗಳ ಸಂಸ್ಕರಣವನ್ನು ನಡೆಸಲು ಮುಖ್ಯವೆಂದೂ ವಿಚಾರಣೆ ಸಂಘದವರ ತಾತ್ಪರ್ಯ. ಆಧುನಿಕ ನಾಗರಿಕತೆಯು ಭೋಗೇಚ್ಛೆಯನ್ನು ಹೆಚ್ಚಿಸಿ ಇಂದ್ರಿಯತೃಪ್ತಿಯನ್ನು ಪ್ರಧಾನವೆಂದು ತಿಳಿಸುವರು. ಜಿತೇಂದ್ರಿಯತ್ವವನ್ನು ವೃದ್ಧಿ ಮಾಡಲು ಇದು ಸಹಾಯವಾಗುವಂತಿಲ್ಲ. ಭೌತಿಕ ಸೌಖ್ಯವನ್ನು ಅಧಿಕವಾಗಿ ಯಾರು ಅನುಭವಿಸುವರೋ ಅವರದ್ದೇ ನಾಗರಿಕತೆಯು ! ನಿರಾಡಂಬರವಾಗಿ ಜೀವಿಸುವವರು ಅನಾಗರಿಕರೆಂದೂ ತಿಳಿಸಲು ಸ್ಪಷ್ಟವಾಗಿದೆ. ಜೀವಿತ ಪರಿಮಾಣವು ಎಷ್ಟು ಹೆಚ್ಚಿದರೆ ಅಷ್ಟು ಮೇಲೆಂದು ತಿಳಿವಳಿಕೆ. ಇಂತಹ ಅಭಿಪ್ರಾಯಗಳು ಪ್ರಬಲವಾದುದರಿಂದ ಜೀವನವು ಸಂಕ್ಲಿಷ್ಟವಾಗಿ ದುಃಖಕರವಾಗಿ ತಿರುಗುತ್ತಿರುವುದು ಆ ಕಾರಣದಿಂದಲೇ ನಿರಾಡಂಬರವಾದ ಜೀವನವನ್ನು ಕೈಹಿಡಿಯಬೇಕೆಂದು ವಿಚಾರಣೆ ಸಂಘದವರು ತಿಳಿಸುತ್ತಿರುವರು. ಗೃಹ ಪರಿಶ್ರಮಗಳನ್ನು ಬಿಟ್ಟು ಯಂತ್ರ ಪರಿಶ್ರಮಗಳು ಸರ್ವತಾ ವ್ಯಾಪಿಸುತ್ತಿರುವುದರಿಂದ ಕೆಲವು ಮಂದಿ ಧನವಂತರಿಂದಲೂ ಪ್ರಜಾಸಾಮಾನ್ಯವು ಮಾತ್ರ ದುಃಖಕರ ಸ್ಥಿತಿಯನ್ನು ಅನುಭವಿಸುತ್ತ ದುರ್ನೀತಿ ಪಾಲಾಗುತ್ತಿರುವರು. ಆದುದರಿಂದ ಆರ್ಥಿಕ, ಸಾಂಘಿಕ ಸ್ಥಿತಿಗಳು ಬದಲಾವಣೆಯಾಗಬೇಕೆಂದು ಅಪೇಕ್ಷಿಸುವುದರಲ್ಲಿ ಸ್ವಲ್ಪವೂ ತಪ್ಪಿಲ್ಲ

ವಿವಾಹದ ಮುಖ್ಯೋದ್ದೇಶ್ಯವು ಕೇವಲ ಕಾಮತೃಪ್ತಿಯಲ್ಲದೆ ಸಂತಾನಾಭಿವೃದ್ಧಿಗೇ ಎಂದು ಭಾವಿಸಿದ್ದಲ್ಲಿ, ಪುತ್ರ ಪುತ್ರಿಕಾ ಜನನವನ್ನು ಹೊಂದಿ ದುಃಖ ಪಡಲನವಶ್ಯಕ. ಎಷ್ಟು ಕಮ್ಮಿ ಮಂದಿ ಮಕ್ಕಳಿದ್ದರೆ ಅಷ್ಟು ಭಾಗ್ಯವೆಂದು ಎಣಿಸುವುದು ತೊಲಗಿಹೋಗಬೇಕೆಂದು ವಿಚಾರಣೆ ಸಂಘದವರು ತಿಳುವಳಿಕೆಕೊಟ್ಟಿರುವರು. ಒಟ್ಟಿನಲ್ಲಿ ಪಾಶ್ಚಾತ್ಯರ ದೃಷ್ಟಿಯಲ್ಲಿ ಬದಲಾವಣೆ ಉಂಟಾಗಬೇಕಾದ ಅವಶ್ಯಕತೆಯು ತಲೆದೋರಿರುವದು. ಪಾಶ್ಚಾತ್ಯ ನಾಗರೀಕತೆಯೇ ಪರಮಾವಧಿ ಎಂದು ಭಾವಿಸುವ ಭಾರತದ ವಿದ್ಯಾವಂತರೂ ಸಹ ಪಾಶ್ಚಾತ್ಯ ಅಭಿಪ್ರಾಯಗಳಿಂದುಟಾಗುತ್ತಿರುವ ನೂತನ ಪರಿಣಾಮವನ್ನು ತಿಳಿಯುವುದು ಶ್ರೇಯಸ್ಕರ

ವರ್ಷಕ್ಕೆ ಆರು ಮಕ್ಕಳು

——

—ಹದಿನೇಳನೆಯ ಶತಮಾನದಲ್ಲಿ ಒಬ್ಬ ಸ್ಕಾಟ್ಲೆನೇಯಿಗೆಯವನು ಒಬ್ಬ ಹೆಂಡತಿಯಿಂದಲೇ ೬೩ ಮಕ್ಕಳನ್ನು ಪಡೆದನು. ಒಬ್ಬ ಕೆನಡಾದವನಿಗೆ ೪೧ ಮಕ್ಕಳಿದ್ದವಂತೆ. ಈಚೆಗೆ ಅಂಟೊನಿ ಕ್ಲಾಕ್ ಎಂಬಾತನು ಮೇರಿ ಜೂನಾಸ್ ಎಂಬಾಕೆಯಿಂದ ೩೨ ಹುಟ್ಟಿದವಂತೆ. ಇದಕ್ಕೂ ಹೆಚ್ಚು ಸ್ವಾರಸ್ಯವೇನೆಂದರೆ ೨ ವರ್ಷಕ್ಕೆ ಸೊನ್ನೆ

ವರ್ಷಿನಲ್ಲಿ ಕೂರ್‌ಲಿಯರ್ ಎಬ್ಬಾಕೆಯು ಜನವರಿಯಲ್ಲಿ ಮೂರು ಮಕ್ಕಳನ್ನೂ ಡಿಸೆಂಬರಿನಲ್ಲಿ ಮೂರು ಮಕ್ಕಳನ್ನೂ ಹೆತ್ತಿರುವಳಂತೆ. ೧೯೨೦ ರಲ್ಲಿ ಹೊರಪಟ್ಟ ಸಮಾಚಾರದ ಪ್ರಕಾರ ಜೊಸೆಫೀ ಆರ್ಮಸ್ ಎಂಬಾಕೆಗೆ ಮದುವೆಯಾಗಿ ೭ ವರ್ಷಮಾತ್ರವಾಗಿದ್ದರೂ ಒಂದು ಸಾರಿ ಮೂರು ಮಕ್ಕಳನ್ನೂ ೨ ಜೋಡಿ ಅವಳಿ ಜವಳಿ ಮಕ್ಕಳನ್ನೂ ಸಾಧಾರಣ ರೀತಿಯಲ್ಲಿ ೩ ಮಕ್ಕಳನ್ನೂ ಬಿಡಿ ಬಿಡಿಯಾಗಿಯೂ ಒಂದು ಸಾರಿ ೪ ಮಕ್ಕಳನ್ನು ಒಟ್ಟಿಗೆಯೂ ಹೆತ್ತಿರುವಳಂತೆ.

—ಯಾರ್ಕ್‌ಷೈರಿನ ಏಟಾನಿನ ಉರ್ಸುಲಾ ಲೈಟ್‌ಫುಟ್ ಎಂಬಾಕೆಗೆ ಸಾಯುವಾಗ ೪೫ ವರ್ಷ ವಯಸ್ಸಾಗಿತ್ತೆಂದೂ ಆಗ ಅವಳಿಗೆ ೯ ಮಕ್ಕಳೂ ೭೯ ಮೊಮ್ಮಕ್ಕಳೂ ೨ ಮರಿಮಕ್ಕಳೂ ಇದ್ದರಂತೆ.

—ಉಟಾವಿನ ಸೆರಾ ಆಕ್ ವುಲ್ ಎಂಬಾಕೆಗೆ ಸಾಯುವಾಗ ೪೧ ವರ್ಷ ವಯಸ್ಸಾಗಿತ್ತೆಂದೂ ಆಗ ಅವಳ ಮನೆತನದವರು ೩೦೩ ಜನರು ಜೀವಂತರಾಗಿದ್ದಲ್ಲದೆ ಇವರ ಪೈಕಿ ೧೪೯ ಮರಿಮಕ್ಕಳೆಂದೂ ೨೩ ಮರಿಮಕ್ಕಳ ಮಕ್ಕಳೆಂದೂ ವರ್ತಮಾನ.

—ಕಂಬರ್‌ಲ್ಯಾಂಡಿನ ವೆಬ್ಬಿನ ವಾಸಸ್ಥರಾದ ೬ ಜನ ಅಣ್ಣ ತಂಗಿಯರು ಎಲ್ಲರಿಗಿಂತಲೂ ಜನನಾಧಿಕ್ಯ ವಿಷಯದಲ್ಲಿ ಹೆಚ್ಚು ಆಶ್ಚರ್ಯವುಂಟುಮಾಡುತ್ತಾರೆ. ಅವರು ಸಾಯುವಾಗ ತಮ್ಮ ಮಕ್ಕಳು ಒಟ್ಟು ೧೦೫೧ ಜನರೂ ಬದುಕಿದ್ದರಂತೆ. ಮೊದಲನೆ ಅಣ್ಣನಾದ ಜೇಸನ್ನಿಗೆ ೪೪೪ ಜನ; ಎರಡನೇ ಮಿಲ್ ಎಂಬಾತನಿಗೆ ೪೦೨ ಜನ; ೩, ೪, ೫ ನೇ ಹೆಣ್ಣು ಮಕ್ಕಳಿಗೆ ೨೩೦, ೨೦೮, ೨೦೧ ಜನರ ಪ್ರಕಾರ ಮತ್ತು ಕಡೆಯ ತಮ್ಮನಿಗೆ ೧೬೬ ಜನರೂ ಸಂತತಿಯಾಗಿದ್ದರಂತೆ.

ವೃತ್ತಾಂತ ಸಂಗ್ರಹ

—ಬಾವ್ಲಾ ಖೂನಿ ಮೊಕದ್ದಮಾ ವಿಷಯದಲ್ಲಿ ಲಂಡನ್ನಿನ ಡೇಲಿ ಹೆರಾಲ್ಡ್ ಪತ್ರಿಕೆಯು ಇತರ ಪತ್ರಿಕೆಗಳ ಆಧಾರದಮೇಲೆ ವಿಪರೀತ ಸಮಾಲೋಚನೆ ಮಾಡಿ ಅಪರಾಧಿಗಳೆಲ್ಲಾ ಇಂದೂರು ಸಂಸ್ಥಾನದ ಅಧಿಕಾರಿಗಳೆಂದೂ, ಆದುದರಿಂದ ಇವರನ್ನು ಅಲ್ಲಿಯ ಮಹಾರಾಜರವರೇ ಎತ್ತಿಕಟ್ಟಿ ಮುಂತಾಜ್ ಬೇಗಂ ಎಂಬುವಳನ್ನು ಬಾವ್ಲಾವಿನಿಂದ ಅಪಹರಿಸಿ ತರಲು ಏರ್ಪಡಿಸಿದ್ದರೆಂದೂ ಮಹಾರಾಜರವರನ್ನೇ ಪ್ರಾಸಿಕ್ಯೂಟ್ ಮಾಡಬೇಕೆಂದೂ ಮುಂತಾಗಿ ಬರೆದಿರಲು ಇಂದೂರು ಸಂಸ್ಥಾನದ ಪಬ್ಲಿಸಿಟಿ ಆಫೀಸರು ಈ ವಿಷಯಗಳೆಲ್ಲಾ ತಪ್ಪು ಭಾವನೆಗಳೆಂದು ಆ ಪತ್ರಿಕೆಗೆ ತಿಳಿಸಿರುವರು.

ಇತ್ತಲಿ ತುರ್ಕಿಯ ಸರ್ಕಾರಕ್ಕೆ ವಿರುದ್ಧವಾಗಿ ಚಳವಳಿ ನಡೆಸಿದರೆಂದು ಆರೋಪಣೆಮೇಲೆ ಅಲ್ಲಿಯ ಏರ್ ಸಂಘದ ಅಧ್ಯಕ್ಷರನ್ನು ಇನ್ನೂ ೯ ಜನ ಬೈದುಮಾಡಲಾಗಿದೆ.

ಚಿ ಮುನಿಸಿಪಾಲಿಟಿಯವರು ಅಲ್ಲಿನ ಪಾರ್ಕಿಗೆ ಪಾರ್ಕು ಎಂದು ಹೆಸರು ಕೊಟ್ಟಿರುವರು. ಕ್ಯೂರ್ ಎಂಬಸ್ಥಳದಲ್ಲಿ ರೈಲಿಗೆ ಹೋಗುತ್ತಿ ಹೆಂಗಸಿನೊಡನೆ ಒಬ್ಬ ಸನ್ಯಾಸಿಯುಮಾ ತಾನು ಆಕೆಯು ಹೋಗುವ ಊರಿಗೆ ಬರುವನೆಂದು ತಿಳಿಸಿ ವಿಷದಿಂದೊಡ ಗೂಡಿದ ನಿಳ್ಳೇಡೆಲೆಯನ್ನು ಆಕೆಗೆ ಕೊಟ್ಟನೆಂದೂ ಅದನ್ನು ಸೇವಿಸುತ್ತಲೇ ಆಕೆಗೆ ಪ್ರಜ್ಞೆತಪ್ಪಿತೆಂದೂ ಎಚ್ಚರವಾದಾಗ ತಾನು ಲಾಖ್ನಾ ಎಂಬ ಸ್ಥಳದಲ್ಲಿದ್ದಳೆಂದೂ, ಸನ್ಯಾಸಿಯು ಮೊದಲು ಆಕೆಯನ್ನು ಒಬ್ಬ ಮಹಮದೀಯನಿಗೆ ಮಾರಿದನೆಂದೂ, ಈತನು ನಂತರ ಒಬ್ಬ ಕ್ರೈಸ್ತಿಕನಿಗೆ ಮಾರಿದನೆಂದೂ, ಅಲ್ಲಿ ತನಗೆ ಉಂಟಾದ ತೊಂದರೆಗಾಗಿ ಈಕೆಯು ಪೋಲೀಸಿಗೆ ರಿಪೋರ್ಟುಮಾಡಲು, ಹಿಂದೂಗಳಿಗೆ ಈಕೆಯನ್ನು ಒಪ್ಪಿಸಿ, ಮುಂದಿನ ವಿಚಾರಣೆ ನಡೆಸುತ್ತಿರುವರೆಂದೂ ತಿಳಿಯಬಂದಿದೆ.

—ಸ್ಪೇನ್ ದೇಶದ ರಾಜನು ಪ್ರಯಾಣಮಾಡುತ್ತಿದ್ದ ಗಾಡಿಯನ್ನು ಮೋಸದಿಂದ ಬಾಂಬನ್ನು ಹೊಡೆದು ಉರುಳಿಸಬೇಕೆಂದು ಕೆಲ ಜನರು ಏರ್ಪಾಡುಮಾಡಿದ್ದರು. ಆದರೆ ವಿಷಯ ಹೊರಪಟ್ಟು ಅಪರಾಧಿಗಳು ಪೋಲೀಸಿಗೆ ಸಿಕ್ಕಿಬಿದ್ದರು. ಅವರಲ್ಲಿ ಮುಖಂಡನಾದ ಎಂಬಿನಿಯರಿಂಗ್ ಪಾಠಶಾಲೆಯ ವಿದ್ಯಾರ್ಥಿಗೆ ೨೦ ವರ್ಷ ಸಜಾ ವಿಧಿಸಲಾಗಿದೆ.

—ಮೈಸೂರು ಛೇಂಬರ್ ಆಫ್ ಕಾಮರ್ಸ್ ಕಾಮರ್ಸಿನವರು ಮದ್ರಾಸ್ ಛೇಂಬರ್ ಆಫ್ ಕಾಮರ್ಸಿನವರಿಗೆ ಅಂಚೆವೆಚ್ಚವನ್ನು ಕಾರ್ಡುಗಳಿಗೆ ೭ ಕಾಸಿನಿಂದ ೩ ಕಾಸಿಗೂ, ಕವರುಗಳಿಗೆ ೧ ಆಣೆಯಿಂದ ೬ ಕಾಸಿಗೂ ಕಡಮೆಮಾಡುವ ವಿಷಯದಲ್ಲಿ ಒರೆದಿರಲು, ಅವರು ಈ ಹೇಳಿಕೆಯನ್ನು ಅನುಮೋದಿಸುವುದಿಲ್ಲವೆಂದು ತಿಳಿಸಿರುವರಂತೆ!

—ಈಜಿಪ್ಟಿನ ಸರದಾರ್ ಲೀ ಸ್ಟಾಕ್‌ರವರ ಖೂನಿ ವಿಷಯದಲ್ಲಿ ೮ ಜನರನ್ನು ಗಲ್ಲಿಗೆ ಹಾಕಲು ನಿರ್ಧರವಾಗಿರುತ್ತೆ. ಈ ಅಪರಾಧಿಗಳನ್ನು ಪತ್ತೆಮಾಡಿಕೊಟ್ಟ ಒಬ್ಬ ಹಳೇ ಬಂದಿವಾನನಿಗೆ ಸರ್ಕಾರದ ಪ್ರಕಟಣೆ ಪ್ರಕಾರ ೧೦,೦೦೦ ಪೌಂ ಇನಾಮಾಗಿ ದೊರೆತಿದೆ.

—ಭರತಖಂಡದ ವೈಸರಾಯರವರಾದ ಲಾರ್ಡ್ ರೆಡಿಂಗ್‌ರವರಿಗೆ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದವರು ಎಲ್. ಎಲ್. ಡಿ. ಡಿಗ್ರಿಯನ್ನು ಗೌರವಾರ್ಥವಾಗಿ ದಯಪಾಲಿಸಿರುವರು.

—ಬೊಂಬಾಯಿನಲ್ಲಿ ನಡೆದ ಬಾವ್ಲಾ ಖೂನಿಯು ಇಂದೂರಿನಲ್ಲಿ ೩೦ ವರ್ಷಗಳ ಹಿಂದೆ ನಡೆದ ಮತ್ತೊಂದು ಅಗಾಧವಾದ ಅತ್ಯಾಚಾರವನ್ನು ನೆನಪಿಗೆ ತರುತ್ತದೆಂದು ಇಂದೂರಿನ ಬಾತ್ಮಿದಾರರೊಬ್ಬರು ಕರಾಚಿಯ ಒಂದು ಪತ್ರಿಕೆಗೆ ಬರೆದಿರುವರು. ಅತ್ಯಾಚಾರವೇನೆಂದರೆ—೩೦ ವರ್ಷಗಳ ಹಿಂದೆ ಇಂದೂರಿನಲ್ಲಿ ಬಲವಂತರಾವ್ ಭೂತೆ ಎಂಬ ವಕೀಲನು ಸೆಕ್ರೆಟರಿಯಾಗಿದ್ದನು. ಮಹಾರಾಜರಿಗೂ ಈತನಿಗೂ ಕಾರಣಾಂತರದಿಂದ ವೈಮನಸ್ಸುಂಟಾಗಲು ವಕೀಲನು ದಸ್ತಗಿರಿಯಾಗುವುದನ್ನು ತಪ್ಪಿಸಿಕೊಳ್ಳಲು ಮಾವಿಗೆ ಹೊರಟುಹೋಗಿ ಅಲ್ಲಿ ಒಂದು ಪತ್ರಿಕೆಯನ್ನು ಪ್ರಕಟಿಸುವುದಕ್ಕಾರಂಭಿಸಿ ಇಂದೂರಿನ ರಾಜ್ಯಭಾರದ ಸ್ಥಿತಿಯನ್ನು ಹೊರಹಾಕಲೆತ್ನಿಸಿದನು. ಈತನನ್ನು ಇಂದೂರಿಗೆ ಪುನಃ ತರಲು ಪ್ರಯತ್ನವು ಜೋರಾಯಿತು. ಬ್ರಿಟಿಷ್ ರಾಜ್ಯದಲ್ಲಿ ದಸ್ತಗಿರಿಮಾಡಬಹುದೆಂಬ ವಾರಂಟು ಇವನ ಮೇಲೆ ಹುಟ್ಟಿತು. ಇದನ್ನು ತಿಳಿದುಕೊಂಡು ವಕೀಲನು ಕೂಡಲೆ ಗ್ವಾಲಿಯರ್ ಸಂಸ್ಥಾನಕ್ಕೆ ತೆರಳಿದನು. ಆಗ ಇಂದೂರಿನ ಪೋಲೀಸು ಸೂಪರ್‌ಟಿಂಡೆಂಟ್ ಅಸೀದ್ ಯಾರ್ ಎಂಬ ಕೂರ್ಗನು ಈ ವಕೀಲನನ್ನು ಹೇಗಾದರೂ ಹಿಡಿದು ಕೊಂಡು ಒರುವೆನೆಂದು ಶಪಥಮಾಡಿ ತನ್ನ ಸರ್ಕಾರದ ಹಣವನ್ನು ಬೇಕಾದಷ್ಟು ಜೊತೆಗೊಳಿಸಿಕೊಂಡು ದ್ವಿಗ್ವಿಜಯಕ್ಕೆ ಹೊರಟನು. ಇವನ ಯಾವ ಪ್ರಯತ್ನವೂ ಸಫಲವಾಗದಿರಲು ರೈಲ್ವೆ ಸ್ಟೇಷನ್ನಿನವರಿಗೆ ಲಂಚ ಕೊಟ್ಟು ಒಂದು ಗಾಡಿಯನ್ನು ರಿಸರ್ವ್ ಮಾಡಿಸಿಟ್ಟಿದ್ದನು. ವಕೀಲನನ್ನು ಉಪಾಯಾಂತರದಿಂದ ಒಂದು ಸಂತೋಷ ಕೂಟಕ್ಕೆ ಕರೆಸಿ ಆಗ ಹಿಡಿದು ತುಂಬ ಹಿಂಸಿಸಿ ಬಾಯಿಗೆ ಬಟ್ಟೆಯನ್ನು ಗಿಡಿದು ಹಿಂದೆಯೇ ರಿಸರ್ವ್‌ಮಾಡಿಸಿದ್ದ ಗಾಡಿಗೆ ಎತ್ತಿಕೊಂಡುಹೋಗುವಷ್ಟರಲ್ಲಿ ಸ್ಟೇಷನ್ನಿನಲ್ಲಿ ಗಲಾಟೆ ಹೆಚ್ಚಿ ಸ್ಟೇಷನ್ ಮಾಸ್ಟರ್‌ರವರು ಅವನನ್ನು ಬಿಡಿಸಿ ತುಂಬಾ ಉಪಚಾರಮಾಡಿದರೂ ಅವನಿಗೆ ಉಂಟಾಗಿದ್ದ ಗಾಯಗಳಿಂದಲೂ ಹಿಂಸೆಯಿಂದಲೂ ಕೂಡಲೇ ಮೃತಹೊಂದಿದನು. ನಂತರ ವಿಚಾರಣೆ ನಡೆದು ೧೫ ಜನ ಅಪರಾಧಿಗಳು ಸಿಕ್ಕಿಬಿದ್ದು ವಿವಿಧ ಸಜಾಕ್ಕೆ ಒಳಪಟ್ಟರು. ಅವದ್ದಿಗೆ ೧೫ ವರ್ಷ ಸಜ ಸಿಕ್ಕಿತು. ಸ್ವಾಮಿ ಕಾರ್ಯ ಧುರಂಧರರೆಂದರೆ ಇಂದೂರು ಜನರಲ್ಲವೆ!

— ಕಾಶಿಯಲ್ಲಿ ನಡೆದ ಈಜಾಟದ ಪರಿಣಾಮದಲ್ಲಿ ೧೩ ಮೈಲಿಯಷ್ಟು ದೂರವನ್ನು ಕೆ. ಸಿ. ಚಕ್ರವರ್ತಿಯೆಂಬಾತನು ೪ ಘಂಟೆ ೪ ನಿಮಿಷದಲ್ಲಿ ಈಜಿ ಮೊದಲನೆಯವರಾದರೆಂದೂ, ಎರಡನೆಯವನು ೧೨ ವರ್ಷದ ಹುಡುಗನೆಂದೂ, ಈ ಪಂಥಕ್ಕೆ ನಿಂತಿದ್ದವರ ಪೈಕಿ ೬ ವರ್ಷದ ಹುಡುಗನೇ ಚಿಕ್ಕವನಾಗಿದ್ದನೆಂದೂ ತಿಳಿಯಬಂದಿದೆ.

—ರಾಣೇಪೇಟೆ ಜೈಲಿಗೆ ೧೦ ಜನ ಹುಡುಗರನ್ನು ಒಬ್ಬ ಪೋಲೀಸಿನವನು ಕರೆದುಕೊಂಡುಹೋಗುತ್ತಿದ್ದಾಗ ಒಬ್ಬನು ದಾರಿಯಲ್ಲಿ ತಪ್ಪಿಸಿಕೊಂಡು ಓಡಿಹೋಗಲು ದಾರಿಯಲ್ಲಿ ಸಿಕ್ಕಿದ ಯಾವನೋ ಒಬ್ಬ ಹುಡುಗನನ್ನು ಹಿಡಿದುಕೊಂಡು ಇಸಂ ಭರ್ತಿಮಾಡಿಕೊಂಡು ಹೋದರು. ಈಚೆಗೆ ಇದು ತಿಳಿದು ಒಂದು ಪೋಲೀಸಿನವರನ್ನು ಹಿಡಿದು ವಿಚಾರಣೆಗೆ ಶುರುವಾಗಿದೆ

—ಮದ್ರಾಸ್ ಕಾರ್ಪೊರೇಷನ್ನಿನಲ್ಲಿ ಮೆಂಬರುತನಕ್ಕೆ ಮಿಸೆಸ್ ದೇವಿದಾಸರೆಂಬುವರು ನೇಮಿಸಲ್ಪಟ್ಟಿದ್ದರು. ಈಗ ಮಿಸೆಸ್ ಹೆರ್ನಿಯನ್ ಎಂಜೆಲೊ ಎಂಬುವಳು ಚುನಾಯಿಸಲ್ಪಟ್ಟಿರುವಳು. ಅಂದರೆ ಮುನಿಸಿಪಾಲಿಟಿಗೆ ೨ ಸ್ತ್ರೀಯರೂ ಆಪಂತಾಯಿತು.

—ವೆಸ್ಟ್ಸೂರಿನಲ್ಲಿನ ತುಂಬಾ ಧನವಂತನಾಗಿದ್ದ ಗೈಗರಿ ಎಂಬಾತನು ತನ್ನ ಹೆಣವನ್ನು ಹಿಂದೂಗಳ ಪದ್ಧತಿಯ ಪ್ರಕಾರ ದಹನಮಾಡಬೇಕೆಂದೂ ಅದೇ ರೀತಿ ಉತ್ತರಕ್ರಿಯಾವಿಧಿಗಳು ನಡೆಯಬೇಕೆಂದೂ ತಾನು ಸಾಯುವಕಾಲದಲ್ಲಿ ತಿಳಿಯಪಡಿಸಿದ್ದನೆಂದೂ ಹಾಗೇ ಮಾಡಲಾಯಿತೆಂದೂ ತಿಳಿದು ಬಂದಿದೆ.

—ಲಾಹೋರಿನಲ್ಲಿ ಅಲೈಯನ್ಸ್ ಬ್ಯಾಂಕಿನಲ್ಲಿ ಒಳ್ಳೇ ನೌಕರಿಯನ್ನು ಹೊಂದಿದ್ದು, ಆ ಬ್ಯಾಂಕು ಮುಳುಗಿ ಹೋದ ೨ ವರ್ಷಗಳಿಂದಲೂ ಯಾವ ಕೆಲಸವೂ ದೊರೆಯದಿರಲು, ಲಾಲ್‌ಚಂದ್ ಎಂಬ ಮಧ್ಯವಯಸ್ಕನಾದ ಪಂಜಾಬಿನವನು ಊರಾಚೆ ಇರತಕ್ಕ ಕೆರೆಯಲ್ಲಿ ಬಿಟ್ಟ ಪ್ರಾಣಪತ್ಯಮಾಡಿಕೊಂಡನು.

—ವೈಕೂಂ ಸತ್ಯಾಗ್ರಹಿಗಳು ಹೋಗಲು ಪ್ರತಿಬಂಧಿಸಿದ್ದ ರಸ್ತೆಗಳ ಮೂಲ್ಕ ಅವರನು ಇನ್ನು ಮುಂದೆ ಬಿಡಲು ದಿವಾನರವರು ಏರ್ಪಾಡು ಮಾಡುತ್ತಿರುವರೆಂದೂ ವರ್ತಮಾನ.

space is not available to the public as it has been reserved for Government Advertisements

e Champion Metropolitan College
ommerce, Economics, Banking, etc.
YELWAL ROAD, MYSORE.
-26 Prospectus can be had free at the ge or by post on receipt of ½ anna stamp ver postage (5-6)

TO LET
to
'ermanent Advertisers

ಸುಗಂಧ ದ್ರವ್ಯಗಳು

ನಮ್ಮಲ್ಲಿ ಎಲ್ಲಾ ತರಹದ ಊದುಬತ್ತಿಗಳೂ, ಬಿಲ್ವೆಗಳೂ, ಪನ್ನೀರು, ರಾಯಲ್ ಸುಗಂಧಿ ತರಹ ಮುರಬ್ಬಾಗಳು, ಎಲ್ಲಾ ತರಹದ ಷರ ಬತ್ತು, ಇವುಗಳೆಲ್ಲಾ ದೊರೆಯುತ್ತವೆ. ಖರೀದಿಯಾಗಿಯೂ, ಪದಾರ್ಥಗಳು ಸಂಬಿಕೆಯಾಗಿ ಇರುತ್ತವೆ. ಅಪೇಕ್ಷಿಸುವವರು ತರಿಸಿಕ್ಕೊಳ್ಳಲಿ ಪ್ರಾರ್ಥನೆ. [22-5]

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್
ಸುಗಂಧಕಾರಿಗಳು, ಮೈಸೂರು

To Popularise your Business
in the Karnataka Provinces
YOU MUST ADVERTISE IN
the "SATYAVADI"
BECAUSE

It is the cheapest and mostup-to-date Karnatic Weekly
It is read largely and widely
Itis circulated among all grades of persons
It offers a profitable medium for advertising

Advertisement in this Paper is a good investment

Registered for Government Advertisements

Your Advertisement is Solicited

RATES of ADVERTISEMENTS

	1 clm	½ clm	¼ clm	1 inch
1 year	Rs 100	55	30	12
6 months	55	30	17	7
3 months	30	17	9	4
1 month	11	6	4	1-8-0
1 insertion	3	2	1-4-0	0-8-0

Advertisement charges are strictly payable in advance. One column measures about 13"×2½". 3columns to a page. Voucher copy supplied free.

All communications & remittances to be addressed to
The Manager,
SATYAVADI Office,
Mysore, S. India.

ಇಂಡಿಯಾ. ಪ್ರಾವಿಡೆಂಟ್ ಕಂಪೆನಿ, ಲಿಮಿಟೆಡ್ 8-5

ಸುಪ್ರಸಿದ್ಧವಾದ ಈ ಕಂಪೆನಿಯು ಕಲ್ಕತ್ತಾದಲ್ಲಿ 1910 ರಲ್ಲಿ ಸ್ಥಾಪಿತವಾದುದು. ಕಂಪೆನಿಯ ಭದ್ರತೆಗೆ ಸರ್ಕಾರದಲ್ಲಿ ಹಣ ಡಿಪಾಜಿಟ್‌ಮಾಡಿರುತ್ತೆ. ತಿಂಗಳಿಗೆ 1 ರೂಪಾಯಿಯ 8 ಆಣೆ ಪ್ರಕಾರ ರೂ 500, ರೂ 250 ಗಳಿಗೆ, ಪುರುಷರಿಗೂ ಸ್ತ್ರೀಯರಿಗೂ, ವೈದ್ಯಪರೀಕ್ಷೆ ಇಲ್ಲದೆ, ವಯಸ್ಸಿನ ಪ್ರತಿಬಂಧಕವಿಲ್ಲದೆ, ಜೀವವಿಮೆ ಮಾಡಲಾಗುತ್ತೆ. ಹೆಚ್ಚು ವಿಷಯಕ್ಕೂ, ಏಜೆಂಸಿಯ ಷರತ್ತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೈಸೂರು ಮತ್ತು ಕೊಡಗಿನ ಚೀಫ್ ಏಜೆಂಟ್
927 ಚಾಮರಾಜ ಪುರಂ, ಮೈಸೂರು.

ಕಾದಂಬರೀ ಸಂಗ್ರಹ

ಮನೋಹರವಾದ ಕರ್ಣಾಟಕ ಮಾಸಪತ್ರಿಕೆ

ಚಾಮರಾಜ ನಗರ

THE MYSORE PRES
RAMAVILAS ROAD
MYSORE

We undertake to print
JOBS — BOOK
&
PERIODICAL

Neat Workmanship
Moderate Charges
Prompt Execut

Colour & artistic wo a speciality

Trial order solicited

B. S. MURTHY, B. A
Proprietor.

ಮೈಸೂರ್ ಪ್ರೆಸ್
ರಮಾವಿಲಾಸ ಅಗ್ರಹಾರ
ಮೈಸೂರು.

ನಮ್ಮಲ್ಲಿ ಎಲ್ಲಾ ವಿಧವಾದ ಚಿಕ್ಕ ವುಟ್ಟ ಮುದ್ರಣ ಕಾರ್ಯವೂ, ಪುಸ್ತಕಗಳೂ, ಮಾಸಪತ್ರಿಕೆಗಳು ಸಕಾಲಕ್ಕೆ ಸುಲಭ ದರದಿಂದ ಮಾಡಲ್ಪಡುತ್ತೆ.

ದಯವಿಟ್ಟು ಗಮನಿಸಿ:—
ನಮ್ಮ ಮುದ್ರಣವು ಬಹು ಅಂದ!
ನಮ್ಮ ಅಕ್ಷರವೆ ಬಲು ಚಂದ!!
ನಮ್ಮ ಕೆಲಸ ನೋಡುವವರಿಗೆ
ನೇತ್ರಾನಂದ

ಬಿ. ಎಸ್. ಮೂರ್ತಿ, ಬಿ
ಪ್ರೊಪ್ರೈಟರ್.

Printed and Published by B.S.Mur at the Mysore Press, Mysore, for and Proprietor.